ಬೆವಿಕಂ

BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

## Bangalore Electricity Supply Company Limited

ಕಂಪನಿ ಕಾರ್ಯಾಲಯ
ಬೆವಿಕಂ., ಕೃ ರಾ ವೃತ್ತ
ಬೆಂಗಳೂರು-1

**ವಿಷಯ :** ರಿಟ್ ಪಿಟೀಷನ್ ಸಂಖ್ಯೆ 19314/2012 ರಲ್ಲಿ ದಿನಾಂಕ 03.01.2014 ರಂದು ಕರ್ನಾಟಕದ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಅನುಷ್ಠಾನದ ಕುರಿತು.

**ಉಲ್ಲೇಖ :**
1. ಕರ್ನಾಟಕದ ಉಚ್ಚ ನ್ಯಾಯಾಲಯ ರಿಟ್ ಪಿಟೀಷನ್ ಸಂಖ್ಯೆ 19314/2012 ರಲ್ಲಿ ದಿನಾಂಕ 03.01.2014 ರಂದು ನೀಡಿದ ತೀರ್ಪು.
2. ಮಾಹಿತಿ ಹಕ್ಕು ಅಧ್ಯಯನ ಕೇಂದ್ರ ಪತ್ರ ದಿನಾಂಕ 22.06.2015.
3. ಕರ್ನಾಟಕ ಸರ್ಕಾರ ಸಿಆಸುಇ ಸುತ್ತೋಲೆ ಸಂಖ್ಯೆ ಸಿಆಸುಇ 86 ಆರ್‌ಟಿಐ 2015 ದಿನಾಂಕ 04.07.2015

******

**ಪ್ರಸ್ತಾವನೆ**

ಮಾಹಿತಿ ಆಯೋಗದ ಆದೇಶವನ್ನು ಪ್ರಶ್ನಿಸಿ ಲೋಕಾಯುಕ್ತದ ಸಾರ್ವಜನಿಕ ಮಾಹಿತಿ ಅಧಿಕಾರಿಯು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾದ ರಿಟ್ ಪಿಟೀಷನ್ ಸಂಖ್ಯೆ 19314/2012 ಅರ್ಜಿಯನ್ನು ವಿಚಾರಣೆ ನಡೆಸಿ ಉಚ್ಚ ನ್ಯಾಯಾಲಯ ನೀಡಿದ ದಿನಾಂಕ 03.01.2014 ರ ಅಂತಿಮ ಆದೇಶದ ನಿರ್ದೇಶನಗಳನ್ನು ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಮೊದಲ ಮೇಲ್ಮನವಿ ಪ್ರಾಧಿಕಾರಿಗಳು ಪಾಲಿಸುವಂತೆ ಹಾಗೂ ಆದೇಶದ ಪ್ರತಿಯನ್ನು ಅಂತರ್ಜಾಲದಲ್ಲಿ ಪ್ರಕಟಿಸಿ ಸೂಕ್ತ ಸುತ್ತೋಲೆಯನ್ನು ಹೊರಡಿಸಬೇಕೆಂದು ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಉಲ್ಲೇಖ (2) ರ ಪತ್ರದಲ್ಲಿ ಪ್ರಧಾನ ಕಾರ್ಯದರ್ಶಿಗಳು, ಸಿಆಸು ಇಲಾಖೆ ರವರನ್ನು ವಿನಂತಿಸಿಕೊಂಡಿರುತ್ತಾರೆ.

ಮೇಲ್ಕಂಡ ಉಚ್ಚ ನ್ಯಾಯಾಲಯದ ತೀರ್ಪಿನ ಅನುಷ್ಠಾನದ ಕುರಿತು ನಿಗಮದ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಸಿಆಸು ಇಲಾಖೆಯ ಉಲ್ಲೇಖ (3) ರ ಸುತ್ತೋಲೆಯಲ್ಲಿ ಸೂಚಿಸಿದ ಹಿನ್ನೆಲೆಯಲ್ಲಿ ಸದರಿ ಸುತ್ತೋಲೆಯನ್ನು ನೀಡಲಾಗಿರುತ್ತದೆ.

**ಸುತ್ತೋಲೆ**

**ಸಂಖ್ಯೆ : ಬೆವಿಕಂ/ಬಿಸಿ-9/ಮುಪ್ರವ್ಯ(ನಿವ್ಯ)/ಉಪ್ರವ್ಯ(ಮಾಹ ಮತ್ತು ಕಅಅ)/ಕ-1(1)/2016-17/ಸಿವೈಎಸ್-** 02 **ದಿನಾಂಕ :** 01/04/2016

ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಅರ್ಜಿ ಸಲ್ಲಿಸುವುದರಿಂದ ಅರ್ಜಿದಾರರಿಗೆ ಮಾಹಿತಿ ಪಡೆಯುವಲ್ಲಿನ ಅನಗತ್ಯ ವಿಳಂಬವನ್ನು ತಡೆಗಟ್ಟಬಹುದೆಂದು ಹಾಗೂ ಅರ್ಜಿದಾರರು ಅನಗತ್ಯ ತೊಂದರೆಗೊಳಗಾಗುವುದನ್ನು ತಪ್ಪಿಸಬಹುದೆಂಬ ನಂಬಿಕೆಯಿಂದ ಕರ್ನಾಟಕ ಉಚ್ಚ ನ್ಯಾಯಾಲಯ ರಿಟ್ ಪಿಟೀಷನ್ ಸಂಖ್ಯೆ 19314/2012 ರಲ್ಲಿ ದಿನಾಂಕ 03.01.2014 ರಂದು ನೀಡಿದ ತೀರ್ಪಿನ ಆದೇಶವನ್ನು(ಸದರಿ

ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದ್ದು) ನಿಗಮದ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಮೊದಲ ಮೇಲ್ಮನವಿ ಪ್ರಾಧಿಕಾರಿಗಳು ಕಡ್ಡಾಯವಾಗಿ ಪಾಲಿಸಬೇಕೆಂದು ಕಟ್ಟು ನಿಟ್ಟಿನ ಸೂಚನೆ ನೀಡಲಾಗಿರುತ್ತದೆ.

1|4|16

ಮುಖ್ಯ ಪ್ರಧಾನ ವ್ಯವಸ್ಥಾಪಕರು
(ನಿಗಮ ವ್ಯವಹಾರಗಳು)

ಪ್ರತಿಗಳು:

1. ಕಂಪನಿ ಕಾರ್ಯದರ್ಶಿಗಳು, ನಿಗಮ ಕಾರ್ಯಾಲಯ, ಬೆವಿಕಂ., ಬೆಂಗಳೂರು.
2. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ) ಮತ್ತು (ಹ ಮತ್ತು ವಾ), ನಿಗಮ ಕಾರ್ಯಾಲಯ, ಬೆವಿಕಂ., ಬೆಂಗಳೂರು.
3. ಎಲ್ಲಾ ಮುಖ್ಯ ಇಂಜಿನಿಯರ್(ವಿ), ವಾ, ಕಾ ಮತ್ತು ಪಾ ವಲಯಗಳು, ಬೆವಿಕಂ.,
4. ಎಲ್ಲಾ ಪ್ರಧಾನ ವ್ಯವಸ್ಥಾಪಕರು(ವಿ) ಮತ್ತು (ಹ ಮತ್ತು ವಾ), ನಿಗಮ ಕಾರ್ಯಾಲಯ, ಬೆವಿಕಂ., ಬೆಂಗಳೂರು.
5. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ವಾ, ಕಾ ಮತ್ತು ಪಾ ವೃತ್ತ, ಬೆವಿಕಂ.,
6. ಪೊಲೀಸ್ ಅಧೀಕ್ಷಕರು, ಜಾಗೃತ ದಳ, ಬೆವಿಕಂ.,
7. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು(ವಿ) ಮತ್ತು (ಹ ಮತ್ತು ವಾ), ನಿಗಮ ಕಾರ್ಯಾಲಯ, ಬೆವಿಕಂ., ಬೆಂಗಳೂರು.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಾ, ಕಾ ಮತ್ತು ಪಾ ವಿಭಾಗ, ಬೆವಿಕಂ.,
9. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಾ, ಕಾ ಮತ್ತು ಪಾ ಉಪ ವಿಭಾಗ, ಬೆವಿಕಂ.,
10. ಆಪ್ತ ಕಾರ್ಯದರ್ಶಿಗಳು, ಸನ್ಮಾನ್ಯ ವ್ಯನಿ/ನಿ(ತಾಂ)/ನಿ(ಹ), ನಿಗಮ ಕಾರ್ಯಾಲಯ, ಬೆವಿಕಂ.,ರವರಿಗೆ.
11. ಬೆವಿಕಂನ ಅಂತರ್ಜಾಲ.
12. ಮಹಾ ಕಡತ.